# 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

# ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**MVC 176/2016** **PW- 2**

ದಿಃ **03.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿಸವಾಲುಃ 3 ನೇ ಎದುರುದಾರರ ಪರ ಶ್ರೀ ಎಮ್ ಎಸ್ ಬಿ ವಕೀಲರಿಂದಃ**

ಪೊಲಿಸರು ನನ್ನ ಹೇಳಿಕೆಯನ್ನು ಎಸ್ ಡಿ ಎಮ್ ಆಸ್ಪತ್ರೆಯಲ್ಲಿ ತೆಗೆದುಕೊಂಡಿರುತ್ತಾರೆ. ಧಾರವಾಡ ಗ್ರಾಮಿಣ ಪೊಲಿಸ್ ಠಾಣಾ ಪೊಲಿಸರು ಬಂದಿದ್ದರು. ಆಸ್ಪತ್ರೆಗೆ ಮಲ್ಲಿಕಾರ್ಜುನ ಇವರನ್ನು ಕರೆದುಕೊಂಡ ಬಗ್ಗೆ ನಮ್ಮ ಹೆಸರು ಯಾವದಾದರೂ ದಾಖಲೆಗಳಲ್ಲಿ ಬರೆದಿದೆಯಾ ಅಂತಾ ಕೇಳಿದ ಪ್ರಶ್ನೆಗೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮನೆಯಿಂದ ಆಂಬುಲೆನ್ಸದಲ್ಲಿ ಮಲ್ಲಿಕಾರ್ಜುನ ಇವರನ್ನು ಆಸ್ಪತ್ರೆಗೆ ಕರೆದುಕೊಂಡು ಬಂದೆವು. ನಮ್ಮ ಊರು ಶಿವಳ್ಳಿಯಲ್ಲಿ ವೈದ್ಯರು ಇಲ್ಲ ಹಾಗೂ ದವಾಖಾನೆನೂ ಇಲ್ಲ. ಶ್ರೀ ಸಂಗಮೇಶ್ವರ ಕ್ಲಿನಿಕ್ ಹೆಬ್ಬಳ್ಳಿಯಲ್ಲಿ ಇದೆ. ಅಲ್ಲಿರುವ ವೈದ್ಯರ ಹೆಸರು ಪ್ರಕಾಶ ಆಲೂರ ಎಂದರೆ ಸರಿ. ದಾವಾಖಾನೆಗೆ ಹೋದ ನಂತರ ವೈದ್ಯರು ಸಾಮಾನ್ಯವಾಗಿ ಇದು ಹೇಗೆ ಆಗಿದೆ ಎಂದು ಕೇಳುತ್ತಾರೆ ಎಂದರೆ ಸರಿ. ಯಾರು ಕರೆದುಕೊಂಡು ಹೊಗಿರುತ್ತಾರೊ ಅವರ ಹೆಸರನ್ನು ವೈದ್ಯರು ಬರೆದುಕೊಳುಳತ್ತಾರೆ ಎಂದರೆ ಸರಿ. ಯಾವ ಕಾರಣಕ್ಕೆ ಗಾಯ ಆಗಿದೆ ಅಂತಾ ವೈದ್ಯರು ಕೇಳಿದ್ದು ನಾವು ಹೇಳಿದೆವು. ಮಲ್ಲಿಕಾರ್ಜುನ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಆ ವೈದ್ಯರು ಒಂದು ಚೀಟಿ ಬರೆದು ಎಸ್ ಡಿ ಎಮ್ ಆಸ್ಪತ್ರೆಗೆ ಹೋಗಿ ಅಂತಾ ಹೇಳಿದರು ಎಂದರೆ ಸರಿ. ಆಲೂರ ವೈದ್ಯರು ನಮ್ಮ ಊರು ಹಾಗೂ ಹೆಬ್ಬಳ್ಳಿಯಲ್ಲಿ ಖಾಯಂ ರೋಗಿಗಳನ್ನು ತಪಾಸಣೆ ಮಾಡುತ್ತಾರೆ ಎಂದರೆ ಸರಿ. ತೀರಿಕೊಂಡವನನ್ನು ರಾಘವೆಂದ್ರ ಕಿತ್ತೂರ ಮೊದಲಿಗೆ ಡಾ.ಆಲೂರು ಇವರ ಬಳಿ ಕರೆದುಕೊಂಡು ಹೋದ ಎಂದರೆ ಸಾಕ್ಷಿ ತಾವು ಹೋಗಿದ್ದೆವು ಎಂದು ನುಡಿಯುತ್ತಾರೆ. ರಾಘವೆಂದ್ರ ಕಿತ್ತೂರ ಈತ ಮೃತನ ತಮ್ಮ ಆಗಬೇಕು ಎಂದರೆ ಸರಿ. ರಾಘವೆಂದ್ರ ಕಿತ್ತೂರ ಬಿ ಎ ಪದವಿ ಓದಿದ್ದಾನೆ. ಈ ಘಟನೆ ಆದಾಗ ರಾಘವೆಂದ್ರ ಈತನದ್ದು ಪಿಯುಸಿ ಆಗಿದ್ದು ಆತನಿಗೆ ತಿಳುವಳಿಕೆ ಇತ್ತು ಎಂದರೆ ಸರಿ. ವೈದ್ಯರು ಏನೆನು ಆಗಿತ್ತು ಅಂತಾ ಕೇಳಿದಾಗ ರಾಘವೆಂದ್ರ ಕಿತ್ತೂರ ವಿವರಣೆ ನೀಡಿದ ಎಂದರೆ ಸರಿ.

ರಾಘವೇಂದ್ರ ಕಿತ್ತೂರ ಹೇಳಿದ ನಂತರ ವೈದ್ಯರು ಪ್ರಥಮ ಚಿಕಿತ್ಸೆ ಕೊಟ್ಟು ಹಾಗೂ ಒಂದು ಚೀಟಿ ನೀಡಿದ ಎಸ್ ಡಿ ಎಮ್ ಆಸ್ಪತ್ರೆಗೆ ಕರೆದುಕೊಂಡು ಹೋಗು ಅಂತಾ ಹೇಳಿದರು ಎಂದರೆ ಸರಿ.

2. ರಾಘವೇಂದ್ರ ಕಿತ್ತೂರ ಇವರ ವೈದ್ಯರಿಗೆ ತಮ್ಮ ಅಣ್ಣ ಮನೆಯಲ್ಲಿ ಬಿದ್ದು ಗಾಯ ಮಾಡಿಕೊಂಡಿದ್ದಾನೆ ಅಂತಾ ಹೇಳಿದ್ದು ಅದನ್ನೆ ವೈದ್ಯರು ಬರೆದು ನಂತರ ಎಸ್ ಡಿ ಎಮ್ ಆಸ್ಪತ್ರೆಗೆ ಕಳುಹಿಸಿದ್ದರು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ರಾಘವೇಂದ್ರ ಕಿತ್ತೂರ ಇವರು ವೈದ್ಯರಿಗೆ ಏನುಹೇಳಿದರು ಹಾಗೂ ವೈದ್ಯರು ಏನು ಬರೆದರು ಎನ್ನುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ರಾಘವೇಂದ್ರ ಕಿತ್ತೂರ ಇವರು ಏನು ಹೇಳಿದರು ವೈದ್ಯರು ಏನು ಚಿಕಿತ್ಸೆ ನೀಡಿದರು ಮತ್ತು ಚೀಟಿಯಲ್ಲಿ ಬರೆದರು ಎನ್ನುವ ವಿಚಾರ ತಿಳಿದುಕೊಂಡಿದ್ದರೆ ನಿಜವಾದ ವಿಷಯ ಗೊತ್ತಾಗುತ್ತಿತ್ತು ಎಂದರೆ ಸರಿ. ನನ್ನ ಪ್ರಕಾರ ಆಲೂರ ವೈದ್ಯರ ಬಳಿ ಬೆಳಿಗ್ಗೆ 10 ಗಂಟೆಗೆ ಹೋಗಿದ್ದೆವು.

3. ಮೃತ ಮಲ್ಲಿಕಾರ್ಜುನ ನನ್ನ ಅಣ್ಣನ ಮಗ. ನಾನು ಒಕ್ಕಲುತನ ಹಾಗೂ ಚಾಲಕ ಉದ್ಯೋಗ ಮಾಡುತ್ತೇನೆ. ನನ್ನ ಮುಖ್ಯ ಹೇಳಿಕೆಯಲ್ಲಿ ನನ್ನ ಉದ್ಯೋಗ ಒಕ್ಕಲುತನ ಅಂತಾ ಬರೆಸಿದ್ದೇನೆ. ನನ್ನ ಮುಖ್ಯವಿಚಾರಣೆಯಲ್ಲಿ ನಾನು ಹೇಳಿದಂತಹ ಅಪಘಾತ ಇಂತಹ ದಿನಾಂಕ ಮತ್ತು ಸಮಯದಲ್ಲಿ ಆಗಿದೆ ಅಂತಾ ಬರೆಸಿದ್ದಿರಾ ಅಂತಾ ಕೇಳಿದ ಪ್ರಶ್ನೆಗೆ ಸಾಕ್ಷಿ ಬರೆಸಿದ್ದೇನೆ ಎಂದು ನುಡಿಯುತ್ತಾರೆ. ಘಟನೆ ನಡೆದ ದಿವಸ ನಾನು ಹೇಳುವಂತೆ ದಿಃ 04.09.2015 ರಂದು ಬೆಳಿಗ್ಗೆ 9.30 ರಿಂದ 10 ರ ಸಮಯದಲ್ಲಿ ಅಪಘಾತ ಆಗಿದೆ. ಆಲೂರು ವೈದ್ಯರ ಬಳಿ ಒಂದು ಗಂಟೆ ಇದ್ದೆವು. ಮೇಲಿನ ವೈದ್ಯರ ಬಳಿ ಹೆಚ್ಚಿನ ಉಪಚಾರಕ್ಕಾಗಿ ಹೋದಾಗ ಹಿಂದೆ ನೀಡಿದ ವೈದ್ಯರ ಚೀಟಿಯನ್ನು ನೊಡುತ್ತಾರೆ ಎಂದರೆ ಸರಿ. ಪ್ರಮಾಣಪತ್ರದಲ್ಲಿ ಏನು ಬರೆದಿದೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಮೃತ ಮಲ್ಲಿಕಾರ್ಜುನ ನನ್ನ ಅಣ್ಣನ ಮಗ ಆಗಿದ್ದು ಅವರ ವಾರಸುದಾರರಿಗೆ ಹಾಗೂ ಕುಟುಂಬದವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಲ್ಲಿಕಾರ್ಜುನ ಈತ ಮನೆಯಲ್ಲಿ ಬಿದ್ದು ಗಾಯ ಮಾಡಿಕೊಂಡು ಮೃತವಾಗಿದ್ದರೂ ಸಹ ಆತನು ಅಪಘಾತದಲ್ಲಿ ಗಾಯ ಮಾಡಿಕೊಂಡು ತೀರಿಕೊಂಡಿದ್ದಾನೆ ಅಂತಾ ಹಾಗೂ ಅವರ ಕುಟುಂಬ ವರ್ಗದವರಿಗೆ ಪರಿಹಾರ ಕೊಡಿಸುವ ಸಲುವಾಗಿ ನಾನು ಅವರ ವಾರಸುದಾರರು ಎಲ್ಲರೂ ಮಿಲಾಪೆಯಾಗಿ ಕಟ್ಟು ಕಥೆ

ಸೃಷ್ಟಿ ಮಾಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದೂರು ಕೊಟ್ಟಿಲ್ಲ ಹಾಗೂ ವಾಹನದ ಸಂಖ್ಯೆ ಹೇಳಿಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಎಂತಹ ಗಾಡಿ ಹಾಗೂ ಗಾಡಿಯ ಸಂಖೆಯಿಂದ ನಾನು ಹೇಳುವ ಅಪಘಾತ ಆಗಿದೆ ಅಂತಾ ಹೇಳಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ಮನೆಯಲ್ಲಿ ಬಿದ್ದ ಸತ್ತ ವ್ಯಕ್ತಿಗೆ ಅಪಘಾತ ಆಗಿ ತೀರಿಕೋಂಡಿದ್ದಾನೆ ಅಂತಾ ಪೊಲಿಸರು ಸಹ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸಾಕ್ಷಿ ತಾನು ಏನೂ ಹೇಳುವದಿಲ್ಲ ಎಂದು ನುಡಿಯುತ್ತಾರೆ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**
**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.